ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 162 ಯುಜಿವಿ 2014

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:31-03-2015.

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ),
**ಬೆಂಗಳೂರು – 560 001.**

REGISTRAR OFFICE
No. 106
23 APR 2015
GULBARGA UNIVERSITY,
GULBARGA.

ಇವರಿಗೆ:

ಕುಲಸಚಿವರು,
ಗುಲ್ಬರ್ಗ ವಿಶ್ವವಿದ್ಯಾಲಯ,
**ಗುಲ್ಬರ್ಗ – 585 106.**

AR/Aca)
23/4/15

ಮಾನ್ಯರೆ,

ವಿಷಯ: ಗುಲ್ಬರ್ಗ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೋರ್ಸಿನ ಪ್ರವೇಶಕ್ಕೆ ಸಂವಿಧಾನ ಅನುಚ್ಛೇಧ 371(ಜೆ) ತಿದ್ದುಪಡಿಯಂತೆ ಸೀಟುಗಳನ್ನು ನಿಗದಿಪಡಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ:ಗುವಿಗು/ವಿಮವಿ/ಪಿ.ಜಿ-1/2014-15/1303, ದಿನಾಂಕ 25-07-2014.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿನ ಪ್ರಸ್ತಾವನೆಯಲ್ಲಿ ಸ್ನಾತಕೋತ್ತರ ಪದವಿ ಮತ್ತು ಪಿಜಿ ಡಿಪ್ಲೊಮಾ ಕೋರ್ಸುಗಳಿಗಾಗಿ ವಿವಿಧ ವಿಷಯಗಳಲ್ಲಿ ಲಭ್ಯವಿರುವ ಸೀಟ್‌ಗಳಿಗೆ ಸಂಬಂಧಿಸಿದಂತೆ ಅನುಚ್ಛೇದ 371(ಜೆ) ಅಡಿಯಲ್ಲಿ ಸ್ಥಳೀಯ ವ್ಯಕ್ತಿಗಳಿಗೆ ಮೀಸಲಾತಿ ನಿಗದಿಪಡಿಸಿ, ಪತ್ರಕ್ಕೆ ಲಗತ್ತಿಸಲಾದ ಅನುಬಂಧದಲ್ಲಿ ನಿಗದಿಪಡಿಸಲಾದ ಮೀಸಲಾತಿ ಕರ್ನಾಟಕ ಶಿಕ್ಷಣ ಸಮಸ್ಥೆಗಳ (ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಪ್ರವೇಶ ನಿಯಂತ್ರಣ) ಆದೇಶ, 2013ರ ಕಂಡಿಕೆ 6(1) ಹಾಗೂ 6(2)ರಂತೆ ಇಲ್ಲದಿರುವುದರಿಂದ, ಕ್ರಮಬದ್ಧವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ, ಈ ಕೆಳಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಮೀಸಲಾತಿಯನ್ನು ಮರುನಿಗದಿಪಡಿಸುವಂತೆ ತಮಗೆ ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ.

1. ಲಭ್ಯವಿರುವ ಸೀಟುಗಳು, ಸ್ಥಳೀಯ ಪ್ರದೇಶ, ಸ್ಥಳೀಯ ವ್ಯಕ್ತಿ, ಅಧಿನಿವಾಸಿ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಶೈಕ್ಷಣಿಕ ಸಂಸ್ಥೆಗಳ ಪ್ರವೇಶ ನಿಯಂತ್ರಣ ಆದೇಶದಲ್ಲಿನ ಅರ್ಥ ವಿವರಣೆಯಂತೆ ಕಟ್ಟುನಿಟ್ಟಾಗಿ ಅನುಸರಿಸತಕ್ಕದ್ದು;

....2

AR/DOM

2. ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ನೆಲೆಸಿರುವ ಹಾಗೂ ಒಂದನೇ ಅನುಸೂಚಿಯಲ್ಲಿರುವ ವಿಶ್ವವಿದ್ಯಾಲಯವಾಗಿದ್ದು, ಸದರಿ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಲಭ್ಯವಿರುವ ಸೀಟುಗಳು, ಸದರಿ ವಿಶ್ವವಿದ್ಯಾಲಯದ Constituent collegesನಲ್ಲಿ ವಿವಿಧ ವಿಷಯಗಳಲ್ಲಿ ಲಭ್ಯವಿರುವ ಸೀಟುಗಳು ಹಾಗೂ ವಿವಿಧ ಅಫಿಲಿಯೇಟೆಡ್ ಕಾಲೇಜುಗಳಲ್ಲಿ ಸರ್ಕಾರದ ವತಿಯಿಂದ ಹಂಚಿಕೆಗೆಂದು ಅಧ್ಯರ್ಪಿಸಿರುವ ಸೀಟುಗಳಲ್ಲಿ ಶೇಕಡಾ 70ರಂತೆ ಮೀಸಲಾತಿ ನಿಗಧಿಪಡಿಸತಕ್ಕದ್ದು;
3. ಮೀಸಲಿರಿಸಲಾದ ಸೀಟುಗಳನ್ನು ಸ್ಥಳೀಯ ವ್ಯಕ್ತಿಗಳಿಂದ ತುಂಬತಕ್ಕದ್ದು;
4. ಸ್ಥಳೀಯ ವ್ಯಕ್ತಿಗಳಿಗೆ ಮೀಸಲಿರಿಸಬೇಕಾದ ಸ್ಥಾನಗಳ ಸಂಖ್ಯೆಯನ್ನು ನಿರ್ಧರಿಸುವಾಗ, ಸ್ಥಾನದ ಯಾವುದೇ ಅಪೂರ್ಣಾಂಕಗಳನ್ನು ಒಂದು ಎಂದು ಶೈಕ್ಷಣಿಕ ಮೀಸಲಾತಿ ಆದೇಶದ ಕಂಡಿಕೆ 6(2)ರಂತೆ ಲೆಕ್ಕ ಹಾಕತಕ್ಕದ್ದು;
5. ಉಳಿದ ಶೇ. 30ರಷ್ಟು ಸೀಟುಗಳು ಮೀಸಲಾತಿ ಅಡಿಯಲ್ಲಿ ಒಳಪಡದಿರುವುದರಿಂದ, ಇಂತಹ ಸೀಟುಗಳನ್ನು ಸ್ಥಳೀಯ ವ್ಯಕ್ತಿಗಳನ್ನೊಳಗೊಂಡಂತೆ ಸ್ಥಳೀಯೇತರ ವ್ಯಕ್ತಿಗಳಿಗೆ (ಇತರೆ ವಿಶ್ವವಿದ್ಯಾನಿಲಯಗಳ ಹಾಗೂ ಅಫಿಲಿಯೇಟೆಡ್ ಕಾಲೇಜುಗಳಿಂದ ಉತ್ತೀರ್ಣಗೊಂಡ ಅರ್ಹ ಅಭ್ಯರ್ಥಿಗಳಿಗೆ) ಹಂಚಿಕೆ ಮಾಡುವುದು;
6. ಮೀಸಲಾತಿಗೆಂದು ನಿಗದಿಪಡಿಸಿದ ಶೇ. 70ರಷ್ಟು ಸೀಟುಗಳು ಹಾಗೂ ಇನ್ನುಳಿದ ಶೇ. 30ರಷ್ಟು ಸೀಟುಗಳ 2 ಪ್ರತ್ಯೇಕ ಘಟಕಗಳಾಗಿದ್ದು, ಪ್ರತಿ ಘಟಕಗಳಲ್ಲಿ ಲಭ್ಯವಿರುವ ಸೀಟುಗಳನ್ನು ತುಂಬುವಲ್ಲಿ ಈಗಾಗಲೇ ಇಲಾಖೆ/ವಿಶ್ವವಿದ್ಯಾನಿಲಯದಲ್ಲಿ ಅನುಸರಿಸಲಾಗುತ್ತಿರುವ ಮೀಸಲಾತಿಯಂತೆ ಪರಿಗಣಿಸತಕ್ಕದ್ದು;
7. ಸ್ಥಳೀಯ ಪ್ರವೇಶಕ್ಕೆ ಸಂಬಂಧಿಸಿದ ಸ್ಥಳೀಯ ವ್ಯಕ್ತಿಗಳಿಗೆ ಮೀಸಲಿಡಲಾದ ಅಥವಾ ಹಂಚಿಕೆ ಮಾಡಲಾದ ಯಾವುದೇ ಸ್ಥಾನಗಳನ್ನು ತುಂಬಲು ಸ್ಥಳೀಯ ಅಭ್ಯರ್ಥಿ ಲಭ್ಯವಾಗದಿದ್ದಲ್ಲಿ, ಅಂತಹ ಸ್ಥಾನಗಳನ್ನು ಶೈಕ್ಷಣಿಕ ಮೀಸಲಾತಿ ಆದೇಶದ ಕಂಡಿಕೆ 8ರಂತೆ, ಅವುಗಳನ್ನು ಮೀಸಲಿಡಲಾಗದಿದ್ದರೆ, ಹೇಗೋ ಹಾಗೆ ಭರ್ತಿ ಮಾಡತಕ್ಕದ್ದು;
8. ಸರ್ಕಾರಿ ಕಾಲೇಜುಗಳಲ್ಲಿ ಲಭ್ಯವಿರುವ ಎಲ್ಲಾ ಸೀಟುಗಳಲ್ಲಿ ಶೇ.70ರಷ್ಟು ಮೀಸಲಾತಿಯನ್ನು ಅನುಚ್ಛೇದ 371(ಜೆ) ಅಡಿಯಲ್ಲಿ ಒದಗಿಸತಕ್ಕದ್ದು.

ಸದರಿ ಪತ್ರವನ್ನು ಸಿಆಸು ಇಲಾಖೆಯ ಹೈದ್ರಾಬಾದ್-ಕರ್ನಾಟಕ ವಿಶೇಷ ಕೋಶದ ಟಿಪ್ಪಣಿ ಸಂಖ್ಯೆ: ಸಿಆಸುಇ 24 ಹೈಕವಿ 2014, ದಿನಾಂಕ 08-09-2014ರನುಸಾರ ಹೊರಡಿಸಿದೆ.

ತಮ್ಮ ನಂಬುಗೆಯ,

(ಸಂಧ್ಯಾ ಎಲ್. ನಾಯಕ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು).